ಶ್ರೀ ಜಿ.ಎಸ್. ಬಾಗಲಕೋಟಿ.—ಈ ಕಾಂಗ್ರೆಸ್ ಕಳೆಯನ್ನು ಕಳೆಯುವುದಕ್ಕೆ ಬೆಂಗಳೂರು ಅಗ್ರಿಕಲ್ಚರಲ್ ಯೂನಿವರ್ಸಿಟಿಯವರು ಬೇರೆ ಕಳೆಯನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಈ ಕಾಂಗ್ರೆಸ್ ಕಳೆಯನ್ನು ನಾಶಮಾಡುವುದಕ್ಕೆ ಸಾಧ್ಯವಿದೆ. ಈ ಕಳೆಗೆ ಬೇರೆ ಹೆಸರು ಕೂಡ ಇಡಬಹುದು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಪಾರ್ಥೇನಿಯಂ ಕಳೆಗೆ ಕಾಂಗ್ರೆಸ್ ಕಳೆ ಎಂದು ಹೇಳುತ್ತಾರೆ. ಇದಕ್ಕೆ ಗುಂಡೂರಾಯರ ಸರ್ಕಾರದಲ್ಲಿ ಒಂದು ಕ್ರಮ ತೆಗೆದುಕೊಂಡಿದ್ದರು. ಇದು ಬಹಳ ವೈಲ್ಡ್ ಆಗಿ ಬೆಳೆಯುತ್ತಿರುವುದರಿಂದ ಇದರ ನಿರ್ಮೂಲನ ಮಾಡಬೇಕೆಂದು ಅವರು ಕ್ರಮ ಕೈಗೊಂಡಿದ್ದರು.

ಶ್ರೀ ಜೆ.ಹೆಚ್. ಪಟೇಲ್.—ಕಾಂಗ್ರೆಸ್ ಕಳೆ ಬಹಳ ವೈಲ್ಡ್ ಆಗಿ ಬೆಳೆಯುತ್ತಾ ಬಂತು. ಇದು ಹಾನಿಕರ ಎಂದು ಈಗ ಒಂದು ಜನತಾ ಕಳೆ ಎಂದು ಮಾಡಿದ್ದೇವೆ. ಇದು ಬೇರೆ ಸಸಿಗಳಿಗೆ ಹಾನಿ ಮಾಡುವುದಿಲ್ಲ, ಬರೀ ಕಾಂಗ್ರೆಸ್ ಕಳೆಗೆ ಮಾತ್ರ ಹಾನಿ ಮಾಡುತ್ತದೆ.

ಗೋಕಾಕ್ ಪಟ್ಟಣದಲ್ಲಿ ನೂಲಿನ ಅಭಾವ ಮತ್ತು ನೂಲು ಮಾರಾಟ ಮಳಿಗೆ ಸ್ಥಾಪಿಸುವುದರ ಬಗ್ಗೆ

876 (2635) ಶ್ರೀ ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗೋಕಾಕ್ ಪಟ್ಟಣದಲ್ಲಿ ನೇಕಾರರಿಗೆ ನೂಲು ಸಿಗದೆ ಬೇರೆ ಸ್ಥಳಗಳಿಂದ ನೂಲು ತಂದು ನೇಯುತ್ತಿರುವುದರಿಂದ ಅವರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಗೋಕಾಕ್ ಪಟ್ಟಣದಲ್ಲಿ ನೂಲು ಮಾರಾಟ ಮಳಿಗೆ ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಹಾಗಿಲ್ಲದಿದ್ದಲ್ಲಿ ಈ ಮಾರಾಟ ಮಳಿಗೆ ಯಾವಾಗಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಎಂ. ರಘುಪತಿ (ಬಂದರು, ಮೀನುಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ಗೋಕಾಕ್‌ದಲ್ಲಿ ನೂಲು ಮಳಿಗೆ ಸ್ಥಾಪಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿಗಮಕ್ಕೆ ತಿಳಿಸಲಾಗಿದೆ.

ಇ) ಸೂಕ್ತ ಕಟ್ಟಡ ದೊರಕಿದೊಡನೆ ಪ್ರಾರಂಭಿಸಲಾಗುವುದು.

ಶ್ರೀ ಎಂ.ಎಲ್. ಮುತ್ತಣ್ಣವರ್.—ಅಧ್ಯಕ್ಷರೇ, ನೂಲು ಮಳಿಗೆಗೆ ಕಟ್ಟಡದ ವ್ಯವಸ್ಥೆ ಕೂಡಾ ಮಾಡಿಕೊಟ್ಟಿದ್ದೇವೆ. ಆದ್ದರಿಂದ ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ರಘುಪತಿ.—ಆಯಿತು, ಕಟ್ಟಡ ಸಿಕ್ಕಿದೆ, ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತಿದ್ದೇನೆ.

ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಾಸದಿಂದ ಉಂಟಾಗಿರುವ ನಷ್ಟ

877 (2437) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ವಿದ್ಯುತ್ ಪೂರೈಕೆಯಲ್ಲಿ ವೋಲ್ಟೇಜುಗಳಲ್ಲಿ ವ್ಯತ್ಯಾಸವಾಗುವುದರಿಂದ ಉದ್ದಿಮೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮ ಏನು ?